



## ಬಟ್ಟೆಗೆ ಅಂಟುವ ‘ನರಿ ಬಾಲ’

‘ಬೆಳಗ್ಗೆ ಎದ್ದು ನರಿ ಮುಖ ನೋಡಿದ್ರೆ ಅದೃಷ್ಟ’ ಎಂದು ಹೇಳುವುದನ್ನು ಕೇಳಿದ್ದೆ. ಆದರೆ ನಾನು ಕಂಡಿದ್ದು ನರಿ ಮುಖದ ಬದಲಿಗೆ ಫಾಕ್ಸ್‌ಟೇಲ್, ಅಂದ್ರೆ ‘ನರಿ ಬಾಲ’. ಇತ್ತೀಚೆಗೆ, ಧಾರವಾಡದ ಬಂಧುಗಳ ಮನೆಗೆ ಹೋಗಿದ್ದೆ. ಪಕ್ಕದ ಪಾಳು ಬಿದ್ದ ಮನೆಯಲ್ಲಿ ಕುರುಚಲು ಬಳ್ಳಿ ಗಿಡ ಗಂಟೆಗಳು ಬೆಳೆದಿದ್ದವು. ಅದರಲ್ಲೊಂದು ‘ಫಾಕ್ಸ್‌ಟೇಲ್’ ಪೊಯೇಸೀ ಕುಟುಂಬಕ್ಕೆ ಸೇರಿದ ಒಂದು ರೀತಿಯ ಕಳೆ ಹುಲ್ಲು, ಅದರ ಹೂಗೊಂಚಲು (ತೆನೆ) ನೋಡಲು ನರಿಯ ಬಾಲದಂತಿದೆ. ಇದಕ್ಕಾಗಿಯೇ ಈ ಹೆಸರು ಬಂದಿದೆ. ಇದನ್ನು ನೋಡಿದಾಗ, ನನ್ನ ಬಾಲ್ಯದ ದಿನಗಳು ನೆನಪಾದವು. ಆಗ ಇಂತಹದ್ದೇ ತೆನೆ ಕಿತ್ತು, ಗೆಳೆಯರಿಗೆ ತಿಳಿಯದಂತೆ ಅವರ ಬೆನ್ನಿಗೆ ಎಸೆತ್ತಿದ್ದೆವು. ಅದು ಅವರ ಬಟ್ಟೆಗೆ ಅಂಟಿಕೊಳ್ಳುತ್ತಿತ್ತು. ಅದನ್ನು ನಾವು ‘ಅಂಟರಿಕೆ’ ಎಂದು ಹೇಳ್ತಾ ಚೇಷ್ಟೆ ಮಾಡುತ್ತಿದ್ದದ್ದು ನೆನಪಾಯ್ತು.

‘ಫಾಕ್ಸ್‌ಟೇಲ್’ ಎಂಬುದು ಹಲವು ಜಾತಿಯ ಕಳೆ ಹುಲ್ಲುಗಳಿಗೆ ನೀಡಲಾಗುವ ಹೆಸರು, ವಿಶೇಷವಾಗಿ ಸೆಟಾರಿಯಾ ಮತ್ತು ಅಲೋಪೆಕ್ಯುರಸ್ ಜಾತಿಗಳಲ್ಲಿ ಬರುವ ಕಳೆ ಹುಲ್ಲುಗಳು. ಜೈಂಟ್ ಫಾಕ್ಸ್‌ಟೇಲ್ (ಸೆಟಾರಿಯಾ ಫ್ಯಾಬೆರಿ) ಒಂದು ಗಮನಾರ್ಹ ಕಳೆಯಾಗಿದ್ದು, ಇವುಗಳಿಂದ ಬೇರೆ ಬೆಳೆಗಳ ಇಳುವರಿ ಕಡಿಮೆ ಆಗುತ್ತದೆ.

–ರಘುನಾಥರಾವ್ ತಾಪ್ಸೆ, ದಾವಣಗೆರೆ

## ಇವು ಫಿರಂಗಿ ಗುಂಡುಗಳಲ್ಲ, ನಾಗಲಿಂಗ ಕಾಯಿಗಳು..!

ಇವುಗಳನ್ನು ನೋಡಿದರೆ ಅರಸರು ಯುದ್ಧಗಳಲ್ಲಿ ಫಿರಂಗಿಗೆ ಬಳಸುತ್ತಿದ್ದ ಭಾರಿ ಗಾತ್ರದ ಗುಂಡುಗಳಂತೆ ಹಾಗೂ ತುಕ್ಕು ಹಿಡಿದ ಲೋಹದ ಗುಂಡುಗಳಂತೆ (ಶಾಟ್‌ಪುಟ್ ಬಾಲ್) ಕಾಣುತ್ತವೆ. ಆದರೆ ಇವು ಅವೆರಡೂ ಅಲ್ಲ. ಅಸಲಿಯಾಗಿ ನಾಗಲಿಂಗ ಗಿಡದ ಕಾಯಿಗಳು. ಲೆಸಿಥಿಡೆಸಿ ಕುಟುಂಬಕ್ಕೆ ಸೇರಿದ ಈ ಮರವು ನಾಗಲಿಂಗಾಕಾರದ ಹೂವು ಬಿಡುವುದಕ್ಕೆ ನಾಗಲಿಂಗ ಗಿಡವೆಂತಲೂ ಅವುಗಳ ಹೂವುಗಳನ್ನು ನಾಗಲಿಂಗ ಪುಷ್ಪ, ಶಿವಲಿಂಗ ಪುಷ್ಪ, ಮಲ್ಲಿಕಾರ್ಜುನ ಪುಷ್ಪ ಅಂತಲೂ ಕರೆಯುತ್ತಾರೆ. ಇದು ವಿಶೇಷವಾಗಿ ಶಿವನಿಗೆ ಪ್ರಿಯವಾದ ಪುಷ್ಪವಾಗಿದ್ದು, ಅದಕ್ಕಾಗಿಯೇ ಶಿವ ದೇವಾಲಯಗಳ ಆವರಣದಲ್ಲಿ ಈ ಮರವನ್ನು ಹೆಚ್ಚಾಗಿ ಬೆಳೆಸಲಾಗುತ್ತದೆ. ಇನ್ನು ಈ ಕಾಯಿಗಳನ್ನು ಪಶು ಆಹಾರವಾಗಿ ಬಳಸುತ್ತಾರೆ ಕೂಡ. ಅಂದಹಾಗೆ ಈ ಮರವು ಕಂಡು ಬಂದಿದ್ದು, ಚಿತ್ರದುರ್ಗ ಜಿಲ್ಲೆಯ ಮಾವಿನಹಳ್ಳಿ ಬಸವೇಶ್ವರ ದೇಗುಲದ ಹೊರ ಆವರಣದಲ್ಲಿ.

–ಸ್ವರೂಪ್ ಕೊಟ್ಟೂರು

## ಗಮನಸೆಳೆಯುವ ಮಾಸ್ ರೋಸ್

ಮನೆಗಳಲ್ಲಿ, ಕಂಪನಿಗಳಲ್ಲಿ ನೇತುಹಾಕುವ ಬಣ್ಣ ಬಣ್ಣದ ಹೂವುಗಳನ್ನು ನೋಡಬಹುದು. ಮಾಸ್ ರೋಸ್ ಮನೆಯ ಸೌಂದರ್ಯವನ್ನು ಹೆಚ್ಚಿಸುವ ಪುಟ್ಟ ಪುಟ್ಟ ಹೂಗಳು. ಇವು ಹೆಚ್ಚಾಗಿ ಕಾಣಸಿಗುವುದಿಲ್ಲ. ಒಂದು ಇಂಚು ಉದ್ದದ ಪ್ರಕಾಶಮಾನವಾದ ಹಸಿರು ಎಲೆಗಳ ಮಧ್ಯದಲ್ಲಿ ಅರಳುವ ಹೂಗಳಿವು. ಮಾಸ್ ರೋಸ್ ಒಂದು ಅರೆರಸಭರಿತ ಸಸ್ಯವಾಗಿದ್ದು, ಚಿಕ್ಕದಾಗಿ ಇರುವ ದಾಸವಾಳಕ್ಕೂ ಹೋಲಿಸಬಹುದು, ಗುಲಾಬಿಗೂ ಹೋಲಿಸಬಹುದು. ಸೂರ್ಯನ ಬೆಳಕಿಗೆ ಅರಳುವ ಮಾಸ್ ರೋಸ್ ಸಂಜೆಯಾಗುತ್ತಿದ್ದಂತೆ ಮುದುಡುತ್ತದೆ. ಹೂವುಗಳ ನಂತರ ಬರುವ ಬೀಜ ಪೆಟ್ಟಿಗೆಯಲ್ಲಿ ಸಣ್ಣ ಕಪ್ಪು ಬೀಜಗಳಿಂದ ತುಂಬಿರುತ್ತವೆ. ಫೇರಿ ಟೇಲ್ಸ್, ಸಿಂಡ್ರೆಲ್ಲಾ, ಸನ್ಡಾನ್ಸ್, ಹಳದಿ, ಮಾರ್ಗರಿಟಾ ರೋಸಿಟಾ, ಇವುಗಳು ಮಾಸ್ ರೋಸ್‌ನ ಹೊಸ ಹೊಸ ಪ್ರಭೇದಗಳಾಗಿವೆ. ಮಣ್ಣು ಸಾಕಷ್ಟು ತೇವವಾಗಿದ್ದರೆ ಮುರಿದ ತುಂಡುಗಳನ್ನು ನೆಟ್ಟರೂ ಬೆಳೆಯಬಹುದು. ಯಾವುದೇ ರೀತಿಯಲ್ಲಿ ಆಕಾರ ಕೊಟ್ಟು ಗಿಡ ನೆಟ್ಟರೂ ಆಕರ್ಷಿಸುವ ಗುಣ ಇದರಲ್ಲಿದೆ. ಆ ಗುಣಕ್ಕೆ ಸರಿಯಾಗಿ ಜೇನುಹುಳು ಚಿಟ್ಟೆಗಳ ಸುತ್ತುವಿಕೆ ಮತ್ತಷ್ಟು ಸುಂದರವಾಗಿರುತ್ತದೆ.

–ಸುಮನಾ ಬಾಯರ್, ಕಾಸರಗೋಡು

